Literacy for a Billion

Movie: Krishna Rukmini
Year: 1988

Song: Nad Lol Shri Krishna
Lyricist: Shyamsundar Kulakarni

ನಾದ ಲೋಲ ಶ್ರೀ ಕೃಷ್ಣ
ನಾದ ಲೋಲ ಶ್ರೀ ಕೃಷ್ಣ
ನಿನಯ ಮುರಳಿಯ ನಾದಕೇ
ನೆನೆವುದು ಮೈಮನ
ಅನುದಿನ ಅನುಕ್ಷಣ
ನಾದ ಲೋಲ ಶ್ರೀ ಕೃಷ್ಣ
ನುಡಿಸುವೆ ನೀನು ಕುಣಿಯುವೆ ನಾನು
ಯುಗ ಯುಗ ಕಳೆದರೂ ದಣಿಯೆವು ನಾವು
ಹಿರಿಯರ ಪಂಧ್ಯದಿ ಗೆಲ್ಲುತ ನಾವು
ಮರೆಯುವ ನಮ್ಮೀ ವಿರಹದ ನೋವು
ಬೆರೆತಿಹ ಮನಗಳ ಎಂದಿಗು ಯಾರೂ
ಏನೇ ಆದರು ಅಗಲಿಸಲಾರರು
ಪ್ರೇಮದ ಭಾವವೆ ಸುಂದರ
ಪ್ರೇಮವೆ ಪೂಜಾ ಮಂದಿರ
ಪ್ರೇಮವೆ ಮಧುರ ಪ್ರೇಮವೆ ಅಮರ
ಪ್ರೇಮವೇ ವಿಶ್ವ ರೂಪಾ
ಪ್ರೇಮವಿಲ್ಲದಾ ಎಲ್ಲವು ನಶ್ವರ
ನಾದ ಲೋಲ ಶ್ರೀ ಕೃಷ್ಣ
ನಿನಯ ಮುರಳಿಯ ನಾದಕೇ
ನೆನೆವುದು ಮೈಮನ ಅನುದಿನ

ಅನುಕ್ಷಣ
ನಾದ ಲೋಲ ಶ್ರೀ ಕೃಷ್ಣ
ಕೃಷ್ಣನೆ ನಿನ ಕೊಳಲಿನ ನಾದ
ಯಾರೂ ಹೆಣೆಯದ ಪ್ರಣಯದ ಕವನ
ನಮ್ಮದು ಎಂದಿಗೂ ನಿಲ್ಲದ ಪಯಣ
ಸೇರಲೆ ಬೇಕೂ ಮಿಲನದ ತಾಣ
ನುಡಿಸುತ ಕೊಳಲೂ ಹಗಲೂ ಇರುಳೂ
ಎನೆದೆ ಶೃತಿಗೇ ಆದೆಯ ಕೊರಳೂ
ಪ್ರೀತಿಗೆ ಇಲ್ಲವು ಸೋಲೂ
ಪ್ರೀತಿಗೆ ಇಲ್ಲವು ಬೀಳೂ
ನಲಿಯುವ ನಾವು ಸಾವಿರ ನವಿಲು
ಚಿಗುರಿದೆ ಆಸೆಗಳೂ
ಹಿಗ್ಗಿ ನಲಿದಿದೆ ಒಲವಿನ ಕಲೆಗಳು
ನಾದ ಲೋಲ ಶ್ರೀ ಕೃಷ್ಣ
ನಿನಯ ಮುರಳಿಯ ನಾದಕೇ
ನಾದ ಲೋಲ ಶ್ರೀ ಕೃಷ್ಣ
ನಿನಯ ಮುರಳಿಯ ನಾದಕೇ
ನಿನಯ ಮುರಳಿಯ ನಾದಕೇ
ನಿನಯ ಮುರಳಿಯ ನಾದಕೇ

Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.

PlanetRead is a tax-exempt, not-for-profit: 501(c) (3) in the United States and 80(G) in India.